## ಕಳೆದ ಸಂಚಿಕೆಯಲ್ಲಿ



ಹೆರಿಗೆಗೆಂದು ಅಮ್ಮನ ಮನೆಗೆ ಬಂದ ಸೀತಾಲಕ್ಷ್ಮಿಗೆ ದೇವಕಿಯ ಸಂಘರ್ಷದ ಬದುಕಿನ ಕಥೆ ನೆನಪಾಯಿತು. ಗಂಡನನ್ನು ಕಳಕೊಂಡು, ಬಾವನ ಕೆಟ್ಟದೃಷ್ಟಿ ತಪ್ಪಿಸಿಕೊಂಡ ದೇವಕಿಗೆ ದೇಹದ ಬಯಕೆಯನ್ನು ಗೆಲ್ಲಲು ಆಗಿರಲಿಲ್ಲ. ತುಂಬು ಬಸುರಿ ಹೆಣ್ಣಿಗೆ ಆಶ್ರಯ ಕೊಟ್ಟಿದ್ದು ಸೀತಾಲಕ್ಷ್ಮಿ ಅಮ್ಮ. ಹೆರಿಗೆಯ ನಂತರ ಸ್ವತಂತ್ರ ಜೀವನ ಆರಂಭಿಸಿದ ದೇವಕಿಗೆ, ಬದುಕು ಹಳಿಗೆ ಮರಳಿತು ಅನ್ನುವಷ್ಟರಲ್ಲಿ ದೇವರು ಮಗನನ್ನು ಕರೆದುಕೊಂಡಿದ್ದ. ಮತ್ತೆ ಒಂಟಿಯಾದರೂ ದೇವಕಿ ಬದುಕಿನ ನಂಬಿಕೆ ಕಳೆದುಕೊಳ್ಳಲಿಲ್ಲ. ಅವಳ ಕಹಿಯಿಲ್ಲದ ಬಾಳು ಸೀತಾಲಕ್ಷ್ಮಿಗೆ ಅಚ್ಚರಿ ಹುಟ್ಟಿಸುತ್ತಿತ್ತು. ಗಂಡು ಹಡೆದ ಸೀತಾಲಕ್ಷ್ಮಿಗೆ ಸಂಭ್ರಮದ ಬಾಣಂತನ ನಡೆಯಿತು. ನಾಮಕರಣವೂ ವೈಭವದಿಂದ ನಡೆದರೂ, ಗಂಡನನ್ನು ಹೊರತುಪಡಿಸಿ ಬೇರೆ ಯಾರೂ ಅಲ್ಲಿಂದ ಬಾರದಿದ್ದುದು ಬಾಣಂತಿ ಮನಸ್ಸಿಗೆ ಪಿಚ್ಚೆನ್ನಿಸಿತು. ಬಾಣಂತನ ಮುಗಿಸಿಕೊಂಡು ಗಂಡನ ಮನೆಗೆ ಹೋದರೆ, ಅಲ್ಲಿನ ಚಿತ್ರಣ ಸಂಪೂರ್ಣ ಬದಲಾಗಿತ್ತು. ನಾದಿನಿ, ಮೈದುನ ಮತ್ತು ಅತ್ತೆ ಬೇರೆ ಮನೆಗೆ ಹೋಗಿದ್ದರು. ತುಂಬಿದ ಮನೆ ಒಡೆದುಹೋಗಿತ್ತು.

‘ದಾಯಾದಿಗಳು ಅಂತ ಮಾತಿಗೆ ಹೇಳೋದು. ಎಲ್ಲಾ ಶುರುವಾಗೋದು ಹೆಂಗಸರಿಂದಾನೇ. ಬರ್ತಾ ಮಿಣ್ಣಗಿರ್ತಾರೆ. ಆಮೇಲೆ ಬಾಲ ಬಿಚ್ತಾರೆ. ಗಂಡಂದ್ರ ಕಾಲಿಗೆ ಗೆಜ್ಜೆ ಇಲ್ಲದೇನೇ ಕುಣಿಸ್ತಾರೆ...’

‘ಹೋಗ್ಲಿ ಬಿಡಿ ಅಂದ್ನಲ್ಲ...’

ಗಂಡನನ್ನು ಕೊರೆಯುತ್ತಿರುವ ವಿಷಯ ಸೀತಾಲಕ್ಷ್ಮಿಗೆ ಅರ್ಥವಾಗಿದೆ. ಅಮ್ಮ ಬಲಗಾಲಿಟ್ಟು ಹೊಕ್ಕ ಮನೆ ಬಿಟ್ಟು, ಜವಾಬ್ದಾರಿ ನಿಭಾಯಿಸಿದ ಹಿರಿಮಗನನ್ನು ತೊರೆದು, ಕಿರಿಯವನ ಬೆನ್ನು ಹತ್ತಿ ಹೋಗಿದ್ದು ಅವನ ಅಭಿಮಾನಕ್ಕೆ ಮುಕ್ಕಾಗಿದೆ. ‘ಏನು ಕಮ್ಮಿ ಮಾಡಿದ್ದೆ ಅವಳಿಗೆ?’ ಎಂದು ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಾನೆ ಶಿವರಾಮ. ತನ್ನ ಮೇಲೆ ಅಮ್ಮನಿಗೆ ಭಾರೀ ಭರವಸೆ, ಅಭಿಮಾನ, ಪ್ರೀತಿ ಎಂದು ಅವನು ಅಂದುಕೊಂಡಿದ್ದ. ‘ವೆಂಕಮ್ಮ ಯಾರ ಜೊತೆ?’ ಎನ್ನುವ ಪ್ರಶ್ನೆ ಬಂದಾಗ ‘ಇದೊಂದು ಕೇಳಬೇಕಾದ ಪ್ರಶ್ನೆಯೇ?’ ಅನಿಸಿತ್ತಂತೆ ಅವನಿಗೆ. ಇನ್ನೇನು ಬಾಣಂತನ ಮುಗಿಸಿಕೊಂಡು ಹಿರಿ ಸೊಸೆ ಮನೆಗೆ ಬರುತ್ತಾಳೆ. ಈಚೆ ಕಡ್ಡಿ ತೆಗೆದು ಆಚೆಗಿಡಬೇಕಾದ ಕಷ್ಟ ಇಲ್ಲದೆ ಕುಳಿತ ಕಡೆ ಅತ್ತೆಯ ಆರೈಕೆ ಮಾಡುತ್ತಾಳೆ. ಮೊಮ್ಮಗನ ಪಾಶ ಅಂತೂ ಇದ್ದೇ ಇರುತ್ತದೆ ಎಂದು ಅವನು ಬಲವಾಗಿ ನಂಬಿಕೊಂಡಿದ್ದ. ಆದರೆ ವೆಂಕಮ್ಮ ತೋರುಬೆರಳು ತೋರಿಸಿದ್ದು ವೆಂಕಟರಾಮನ ಕಡೆ. ಕಿರಿಮಗನ ಕಣ್ಣುಗಳು ಅರಳಿದ್ದರೆ, ಹಿರಿಮಗ ತಲೆತಗ್ಗಿಸಿ ಕೂರಬೇಕಾದ ಪರಿಸ್ಥಿತಿ. ಅಮ್ಮನ ಬಾಲ ಹಿಡಿದು ಓಡಾಡುತ್ತಿದ್ದ ವೆಂಕಟರಾಮನೇ ಅವಳಿಗೆ ಹೆಚ್ಚಾಗಿಬಿಟ್ಟ. ಅಲ್ಲದೆ ಕಿರಿಸೊಸೆಯ ಸಂಬಂಧದ ಎಳೆ ಕೂಡಾ ಇತ್ತಲ್ಲ? ಕೂತಲ್ಲೇ ಕೂತಿರುವ, ಮನೆಗೆಲಸದಲ್ಲಿ ಮೂರುಕಾಸಿನ ಪ್ರಯೋಜನಕ್ಕೆ ಬರದ ಅತ್ತೆಯನ್ನು ಕನಕ ನಿರಾಕರಿಸುತ್ತಾಳೆ ಅಂದುಕೊಂಡಿದ್ದರೆ ಹಾಗೇನಾಗಲಿಲ್ಲ. ಆ ಕ್ಷಣದಲ್ಲಿ ಅವಳು ತೆಪ್ಪಗಿದ್ದುಬಿಟ್ಟಳು.

‘ನೋಡು, ಹೇಳಿಟ್ಟಿರ್ತೀನಿ. ಮಗೂನ ನೋಡೋಕೆ ಅವರಾಗಿ ಬಂದ್ರೆ ನನ್ನ ಅಭ್ಯಂತರ ಇಲ್ಲ. ಒಂದ್ಲೋಟ ಕಾಫಿ ಕೊಟ್ಟು ಸಾಗ ಹಾಕು. ಅದು ಬಿಟ್ಟು ಅತಿರೇಕದ ಉಪಚಾರ ಆಗ್ಲಿ, ಮಾತೇ ಆಗ್ಲಿ, ಎಂತದೂ ಬೇಡ. ಪದೇ ಪದೇ ಅವರು ಇಲ್ಲಿಗೆ ತುಕ್ಕೋದೂ ಬೇಡ...’

‘ಅವರಾಗಿ ಬರ್ಲಿಲ್ಲ ಅಂತ ಇಟ್ಗಳಿ. ಅತ್ತೆಗೆ ಮಗು ತೋರಿಸ್ಕಂಡು ಬರೋದು ಬ್ಯಾಡನ್ರೀ? ಅವರ ತೊಡೆ ಮೇಲೆ ಮಲಗಿಸಿ ಆಶೀರ್ವಾದ ತಗಳ್ದಿದ್ರೆ ಮನಸ್ಸು ಕೇಳುತ್ತಾ? ಒಂದ್ಸಲ, ಒಂದೇ ಒಂದ್ಸಲ ಹೋಗಿ ಬಂದ್ರೆ ಏನಾಗ್ಬಿಡುತ್ತೆ? ನಮ್ಮ ಕರ್ತವ್ಯ ನಾವು ಮಾಡಿದ ಹಾಗಾಗುತ್ತೆ...’

ಇವಳಾ, ಬಾಯಲ್ಲಿ ಬೆರಳಿಟ್ಟರೆ ಕಚ್ಚಲು ಬರುವುದಿಲ್ಲ ಎನ್ನುವಂತಿದ್ದ ಸೀತಾಲಕ್ಷ್ಮಿಯಾ ಇಷ್ಟು ಮಾತಾಡಿದ್ದು ಎನ್ನುವಂತೆ ಶಿವರಾಮ ಅವಳ ಕಡೆ ದುರುಗುಟ್ಟಿ ನೋಡಿದ. ‘ಯಾಕೇ, ನಾಲಿಗೆ ಉದ್ದ ಆಗ್ತಿದೆ?’ ಎಂದು ಅವನು ಕೇಳಿಯಾನೆಂದು ಸೀತಾಲಕ್ಷ್ಮಿಯ ನಿರೀಕ್ಷೆ. ಅವನು ಅಂದಿದ್ದೇನು?

‘ಆಯ್ತು, ನಿಂಗೆ ಅಷ್ಟು ತೆವಲು ಇದ್ರೆ ಮಗೂನ ತೋರಿಸೋಕೆ ಕರ್ಕಂಡ್ಹೋಗು. ಆದ್ರೆ ವಾಪಸು ಬರ್ಬೇಡ. ಅಲ್ಲೇ ಇದ್ಬಿಡು. ನನ್ನ ಪಾಲಿಗೆ ಎಲ್ಲಾ ಸತ್ರು ಅಂತ ಎಳ್ಳು ನೀರು ಬಿಡ್ತೀನಿ.’

ಬಾಯಿ ತೆಗೆದರೆ ಅಪಶಕುನದ ಮಾತು. ಮತ್ತೆ ಉಸಿರೊಡೆಯಲಿಲ್ಲ ಸೀತಾಲಕ್ಷ್ಮಿ.

***

ತಾನು ಬಂದ ಸುದ್ದಿ ತಿಳಿದು ಮೊಮ್ಮಗನನ್ನು ನೋಡಿ ಹೋಗುವ ಸೆಳೆತದಿಂದಾದರೂ ಅತ್ತೆ ಬರಬಹುದೆಂಬ ನಿರೀಕ್ಷೆ ಇತ್ತು ಸೀತಾಲಕ್ಷ್ಮಿಗೆ. ನಿರೀಕ್ಷೆ ಮಾತ್ರವಲ್ಲ, ನಂಬುಗೆಯೂ. ಆದರೆ ಅವಳು ಬಂದು ವಾರ ಕಳೆದರೂ ಆ ಮನೆಯವರ್ಯಾರೂ ಇತ್ತ ಮುಖ ಹಾಕಲಿಲ್ಲ. ಅವಳಿಗೆ ಗಂಡನ ಮಾತು ಮೀರಿ ಹೋಗುವ ಧೈರ್ಯವಿಲ್ಲ. ಆಡಿದಂತೆ ಮಾಡುವುದಕ್ಕೆ ಅವನು ಹಿಂಜರಿಯುವವನಲ್ಲ. ಮನೆ ಸೇರಿಸಲಿಲ್ಲ ಅಂದರೆ ಮತ್ತೆ ತೌರಿಗೆ ಹೋಗಿ ನೆಲೆಯಾಗಲು ಸಾಧ್ಯವೇ? ನಾಚಿಕೆಗೇಡು.

ಸೀತಾಲಕ್ಷ್ಮಿಯ ಅಣ್ಣನಿಗೆ ಮದುವೆ ಗೊತ್ತಾಗಿದೆ. ಮದುವೆಗೆ ನಾಲ್ಕು ದಿನ ಮೊದಲು ಹೋಗಿ, ನಾಲ್ಕು ದಿನ ಕಳೆದ ನಂತರ ಬರಬಹುದೆಂಬ ಆಸೆಗೆ ಕಲ್ಲು ಬಿದ್ದಿದೆ. ಹಿಂದಿನ ದಿನ ಹೋಗಿ ಮದುವೆ ಮುಗಿಸಿಕೊಂಡು ತಿರುಗಿ ಬರುವ ಮಾತಾಡಿದ್ದಾನೆ ಶಿವರಾಮ. ಮನೆಗೆ ಆಳುಗಳ ಕಾವಲು. ‘ನಾವು ಬರೋವಷ್ಟ್ರಲ್ಲಿ ಏನೂ ಬೇಕಾರೂ ಆಗಬೋದು. ಮನೆ ದರೋಡೆ ಆದ್ರೂ ಆಶ್ಚರ್ಯ ಇಲ್ಲ. ಮದುವೆಗೆ ಹೋಗ್ತೀವಿ, ಮದುವೆಗೆ ಹೋಗ್ತೀವಿ ಅಂತ ಈಗಿಂದ ಕೆಲಸದವರ ಎದುರು ನೀನು ಡಂಗುರ ಸಾರೋದು ಬೇಡ. ಯಾರಿಗೂ, ಏನೂ ಗೊತ್ತಾಗ್ಬಾರ್ದು. ನಂಬಿಕಸ್ಥರು ನಾಕು ಜನ ಕಾವಲು ಮಾಡ್ತಾರೆ...’

ಇಲ್ಲ, ಇದು ದಾಯಾದಿಗಳು ಪಾಲು ಮಾಡಿಕೊಂಡು ದೂರ ದೂರ ಇರುವ ಮಾತು ಮಾತ್ರ ಅಲ್ಲ, ಮತ್ತೇನೋ ನಡೆದಿದೆ. ಇಲ್ಲದಿದ್ದರೆ ಇಷ್ಟು ಹಟ, ದ್ವೇಷ ಸಾಧಿಸುವಂತದು ಏನಿದೆ? ಒಬ್ಬರ ಮನೆಗೊಬ್ಬರು ಹೋಗಿ, ಬಂದು ಮಾಡಿಕೊಂಡು ಸಂತೋಷವಾಗಿದ್ದರೆ ಯಾರ ಗಂಟು ಕರಗುತ್ತೆ? ಗಂಟಲಲ್ಲಿರುವ ಮಾತು ಬಾಯಿಗೆ ಬರಲಿಲ್ಲ ಸೀತಾಲಕ್ಷ್ಮಿಗೆ. ಗಂಡ ಸುಮುಖನಾಗಿ ಕಂಡರೆ ಮೊದಲಿಗಿಂತ ಎರಡು ಮಾತು ಹೆಚ್ಚಿಗೆ ಆಡುವ ಸಲಿಗೆ ಅವಳಲ್ಲಿ ಬೆಳೆದಿರಬಹುದೇ ವಿನಾ ಅವನನ್ನು ಎದುರು ಹಾಕಿಕೊಂಡು ಮೀರುವ ಛಾತಿ ಅವಳಿಗಿಲ್ಲ. ಶಿವರಾಮ ಈಗ ಮೊದಲಿಗಿಂತಾ ಹೆಚ್ಚು ತಲೆತಿರುಕ, ಕೋಪಿಷ್ಟ ಆಗಿದ್ದಾನೆಂದು ಅವಳಿಗೆ ಅನಿಸಿದ್ದಿದೆ. ಅಮ್ಮ ಕೂಡಾ ತನಗೆ ಬೆಲೆ ಕೊಡಲಿಲ್ಲ, ಜೊತೆಗಿರಲು ಬಯಸಲಿಲ್ಲ ಎನ್ನುವ ಅಸಹನೆ? ಅಕ್ಕನ ಕುರಿತಾದ ಎಂದೂ ಕರಗದ ಕೋಪ? ‘ಏನೋ ನಡೆದಿದೆ.., ಮತ್ತೇನೋ ನಡೆದಿದೆ...’ ಸೀತಾಲಕ್ಷ್ಮಿ ಕನವರಿಸುತ್ತಿದ್ದಳು. ಗುಟ್ಟು ರಟ್ಟಾಗುವ ದಿನ ಹತ್ತಿರ ಬಂದಿತ್ತು. ಮದುವೆಗೆ ಹೊರಡುವ ಹಿಂದಿನ ದಿನ ಯಾವತ್ತೂ ಹಗಲು ಮುಚ್ಚುವ ಅಭ್ಯಾಸವಿರದಿದ್ದ ಮುಂಚೇಕಡೆಯ ಬಾಗಿಲನ್ನು ಮುಚ್ಚಿ ಬಂದ ಶಿವರಾಮ. ‘ಬಾರೇ ಇಲ್ಲಿ...’ ಎಂದು ಹೆಂಡತಿಯನ್ನು ಕರೆದ. ಬಂದಳು ಸತೀಮಣಿ.

‘ಮದುವೆಗೆ ಯಾವ ಒಡವೆ ಬೇಕೂಂತ ಹೇಳು. ತೆಕ್ಕೊಡ್ತೀನಿ. ಬಿಚ್ಕೋಲೆ ಗೌರಮ್ಮನ ಥರ ಹೋಗೋದು ಬೇಡ. ಅತಿ ಅತೀ ಅನಿಸೋದೂ ಬೇಡ...’

ಉಡುವ, ತೊಡುವ ಸಂಭ್ರಮ ಸೀತಾಲಕ್ಷ್ಮಿಯನ್ನು ಆವರಿಸಿಕೊಂಡಿತು. ಅವಳು ಗಂಡ ಟ್ರೆಜರಿ ಬಾಗಿಲು ತೆಗೆಯುವುದನ್ನೇ ಕಾದು ಕೂತಳು. ಟ್ರೆಜರಿಯ ಒಳಗಿದ್ದ ರೇಷ್ಮೆ ಗಂಟಿನಿಂದ ಗಂಡ ಎರಡೆಳೆಯ ಅವಲಕ್ಕಿ ಸರ ತೆಗೆದುಕೊಟ್ಟ. ಎರಡು ಜೊತೆ ಬಳೆ, ಎರಡು ಉಂಗುರ. ಇಷ್ಟು ಸಾಕು... ಎನ್ನುತ್ತಾ ಮತ್ತೆ ಗಂಟು ಕಟ್ಟಿಡಲು ಉದ್ಯುಕ್ತನಾದ ಗಂಡನೊಡನೆ ಸೀತಾಲಕ್ಷ್ಮಿ ಕುತೂಹಲದಿಂದ ಕೇಳಿದಳು,

‘ಎಂತೆಂತಾ ನಗ ಇದೆ ಅಂತ ತೋರ್ಸಿ ನೋಡಣ. ಯಾವಾಗ ನೋಡಿದ್ರೂ ಅವಲಕ್ಕಿ ಸರಾನೇ ಹಾಕ್ಕಂತಿದ್ದಿದ್ದು. ಬೇರೆ ಇದ್ರೆ ಕೊಡಿ...’

‘ನೋಡೋಕೆಂತದಿದೆ ಗೊರಟು? ಕೊಟ್ಟಿದ್ದು ಹಾಕ್ಕಾ...’